ಮಾಡಬೇಕಾದ 12.50 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

(7) ಅಪೆಕ್ಸ್ ಬ್ಯಾಂಕು ತನ್ನ ಸ್ವಂತ ನಿಧಿಗಳಿಂದ ರೂ. 73.00 ಕೋಟಿಗಳ ಅಲ್ಪಾವಧಿ ಕೃಷಿ ಪತ್ತಿನ ಮಿತಿಯನ್ನು ಮಂಜೂರು ಮಾಡಿರುತ್ತದೆ.

(8) ಮುಂಗಾರು 2002 ರ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಬ್ಯಾಂಕಿಗೆ ಇದುವರೆವಿಗೆ ರೂ. 3.18 ಕೋಟಿ ಬಿಡುಗಡೆಗೊಳಿಸಲಾಗಿದೆ.

(9) 2005–06ನೇ ಸಾಲಿನ ಬಡ್ಡಿ ದಂಡದ ಬಡ್ಡಿ ಮನ್ನಾ ಯೋಜನೆಯಡಿ ಬ್ಯಾಂಕಿಗೆ ಇದುವರೆಗೆ ರೂ. 54–30 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

(10) ಠೇವಣಿದಾರರಿಗೆ ರೂ. 24.05 ಕೋಟಿ ಠೇವಣಿ ಹಣ ವಾಪಸ್ಸು ಮಾಡಲಾಗಿದೆ. (ಏಪ್ರಿಲ್–2006 ರಿಂದ 21–3–2007 ರವರೆಗೆ)

(ಈ) ಧಾರವಾಡ ಕೆ.ಸಿ.ಸಿ. ಬ್ಯಾಂಕ್ ವತಿಯಿಂದ ಹಾವೇರಿ ಜಿಲ್ಲೆಯಲ್ಲಿ ಅಸಲನ್ನು ಮರುಪಾವತಿಸಿ ಬಡ್ಡಿ ಮನ್ನಾ ಸೌಲಭ್ಯ ಪಡೆದ ರೈತರಿಗೆ ಈಗಾಗಲೇ 2007–08 ನೇ ಸಾಲಿಗೆ ಕೃಷಿ ಸಾಲವನ್ನು ವಿತರಿಸಿದೆ. ಸಾಲ ಮನ್ನಾ ಸೌಲಭ್ಯ ಪಡೆದಂತಹ ರೈತರಿಗೆ ಕೂಡ ಪುನಃ ಬೆಳೆ ಸಾಲವನ್ನು ವಿತರಿಸುವ ಕಾರ್ಯವು ಈಗ ಪ್ರಗತಿಯಲ್ಲಿರುತ್ತದೆ.

**760 (1119) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್)** :–ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) 2006–07 ಸಾಲಿನಲ್ಲಿ ನೇ ಸಾಲಿನಲ್ಲಿ ಶಿಗ್ಗಾಂವ್ ಸವಣೂರ ತಾಲ್ಲೂಕುಗಳಿಗೆ ಬಿಡುಗಡೆಗೊಳಿಸಲಾದ ಅನುದಾನವೆಷ್ಟು (ಕಾಮಗಾರಿವಾರು) ವಿವರ ಒದಗಿಸುವುದು) ;

(ಆ) ಶಿಗ್ಗಾಂವ ಸವಣೂರ ತಾಲ್ಲೂಕುಗಳಿಗೆ "ರಾಷ್ಟ್ರೀಯ ತೋಟಗಾರಿಕಾ ಮಿಷನ್" ಕಾರ್ಯಕ್ರಮದಡಿಯಲ್ಲಿ ಕಾಮಗಾರಿ ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ;

(ಇ) ಈ ತಾಲ್ಲೂಕುಗಳಲ್ಲಿ ಅಂತರ ಜಲಮಟ್ಟ ಕುಸಿದಿರುವುದರಿಂದ ಕಡಿಮೆ ನೀರನ್ನು ಉಪಯೋಗಿಸಿ ತೋಟಗಾರಿಕೆ ಬೆಳೆಯನ್ನು ಬೆಳೆಯಲಿಕ್ಕೆ ಸರ್ಕಾರದ ಯೋಜನೆಯೇನು ;

(ಈ) ಡಾ॥ ನಂಜುಂಡಪ್ಪನವರ ವರದಿ ರೀತ್ಯಾ ಸವಣೂರ ತಾಲ್ಲೂಕು ಹಿಂದುಳಿದ ತಾಲ್ಲೂಕು ಆಗಿರುವುದರಿಂದ ರೈತರಿಗೆ ತೋಟಗಾರಿಕಾ ಬೆಳೆ ಬೆಳೆಯಲು ಹೆಚ್ಚಿನ ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

**ಶ್ರೀ ಶಶಿಕಾಂತ ಅ. ನಾಯಕ (ತೋಟಗಾರಿಕೆ ಸಚಿವರು) :-**

(ಅ) 2006-07 ನೇ ಸಾಲಿನಲ್ಲಿ ಶಿಗ್ಗಾಂವ್ ತಾಲ್ಲೂಕಿಗೆ 6.158 ಲಕ್ಷ ರೂ. ಗಳನ್ನು ಹಾಗೂ ಸವಣೂರು ತಾಲ್ಲೂಕಿಗೆ 7.359 ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಕಾಮಗಾರಿ ವಿವರಗಳನ್ನು ಕೆಳಗೆ ನೀಡಲಾಗಿದೆ.

(ಲಕ್ಷ ರೂ.ಗಳಲ್ಲಿ)

| ಕ್ರ ಸಂ. | ಯೋಜನೆಗಳು | ಶಿಗ್ಗಾಂವ್ | ಸವಣೂರು |
|---|---|---|---|
| 1 | ಪ್ರಚಾರ ಮತ್ತು ಸಾಹಿತ್ಯ | 0.01 | 0.01 |
| 2 | ರೈತರಿಗೆ ಸಹಾಯ | 0.15 | 0.21 |
| 3 | ವಿಶೇಷ ಘಟಕ ಯೋಜನೆ | 0.193 | 0.194 |
| 4 | ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆ | 0.01 | 0.01 |
| 5 | ತೋಟಗಾರಿಕೆ ಕಟ್ಟಡಗಳು | 0.25 | 0.3 |
| 6 | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ | | |
| | (ಎ) ಜೈವಿಕ ಪೀಡೆ ನಾಶಕಗಳಿಂದ ರೋಗ ಮತ್ತು ಕೀಟಗಳ ನಿಯಂತ್ರಣ | 0.26 | 0.25 |
| | (ಬಿ) ಉಪಗ್ರಹ ಆಧಾರಿತ ತರಬೇತಿ | 0.04 | 0.04 |
| | (ಸಿ) ಎರೆ ಹುಳು ಘಟಕ ಸ್ಥಾಪನೆಗೆ ಸಹಾಯಧನ | 1.20 | 1.20 |
| | (ಡಿ) ಸಾವಯುವ ಕೃಷಿಗೆ ಸಹಾಯಧನ | 0.5 | 0.5 |
| | (ಇ) ರೈತರ ಪ್ರವಾಸ/ತರಬೇತಿ | 0.045 | 0.045 |
| 7 | ಸೂಕ್ಷ್ಮ ನೀರಾವರಿ ಯೋಜನೆ | 3.5 | 4.6 |
| | ಒಟ್ಟು | **6.158** | **7.359** |

(ಆ) ಮೇಲಿನ (ಅ) ನಲ್ಲಿ ಉತ್ತರಿಸಿರುವಂತೆ

(ಇ) ಅಂತರ ಜಲಮಟ್ಟ ಕುಸಿದಿರುವುದರಿಂದ ಕಡಿಮೆ ನೀರನ್ನು ಉಪಯೋಗಿಸಿ ತೋಟಗಾರಿಕೆ ಬೆಳೆಯನ್ನು ಬೆಳೆಯಲಿಕ್ಕೆ ಹನಿ ನೀರಾವರಿ, ತುಂತುರು ನೀರಾವರಿ, ಮಳೆ ನೀರು ಕೊಯ್ಲು, ಜಲಾನಯನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**761 (1120) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್)** :–ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) 2006–07ನೇ ಸಾಲಿನಲ್ಲಿ ಶಿಗ್ಗಾಂವ–ಸವಣೂರ ತಾಲ್ಲೂಕುಗಳಿಗೆ ಯಾವ ಯಾವ ಯೋಜನೆಗಳಿಗೆ ಎಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ (ವಿವರ ಒದಗಿಸುವುದು) ;

(ಆ) ಶಿಗ್ಗಾಂವ ತಾಲ್ಲೂಕು ಎನ್.ಎಂ. ತಡಸ ನೀರಲಗಿ, ತಿಮ್ಮಾಪುರ ಗ್ರಾಮಗಳ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜಮೀನುಗಳಿಗೆ ಅತಿವೃಷ್ಟಿಯಿಂದ ಬೀಜ ಬಿತ್ತಿರುವ ಜಮೀನುಗಳು ಹಾಗೂ ಬದುವುಗಳು ಕೊಚ್ಚಿ ಹೋಗಿ ರೈತರಿಗೆ ಅತೀ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ರೈತರಿಗೆ ಪರಿಹಾರ ನೀಡಲು ಸರ್ಕಾರದ ಕ್ರಮವೇನು ;

(ಈ) ಶಿಗ್ಗಾಂವ – ಸವಣೂರ ತಾಲ್ಲೂಕುಗಳಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಉತ್ತೇಜನ ನೀಡಲಾಗುವುದೇ ;

(ಉ) ಈ ತಾಲ್ಲೂಕುಗಳಿಗೆ ಜಲರಕ್ಷಣೆ ಹಾಗೂ ಮಳೆ ಕೊಯಲು ಕಾಮಗಾರಿಗಳಿಗೆ ಬಿಡುಗಡೆಗೊಳಿಸಲಾದ ಅನುದಾನವೆಷ್ಟು ;

(ಊ) ಶಿಗ್ಗಾಂವ–ಸವಣೂರ ತಾಲ್ಲೂಕುಗಳಲ್ಲಿ ರಿಯಾಯಿತಿ ದರದಲ್ಲಿ ಪಡೆಯುವ ಬಿತ್ತನೆ ಬೀಜಗಳನ್ನು ರೈತರು ಹೊಲಗಳಲ್ಲಿ ಬಿತ್ತಿರುವ ಬಗ್ಗೆ ಸರ್ವೇ ಮಾಡಿಸಿ ವರದಿ ನೀಡಲಾಗುವುದೇ ;

(ಋ) ಹಾಗಿದ್ದಲ್ಲಿ, ಎಷ್ಟು ಕಾಲಾವಧಿಯೊಳಗೆ ಒದಗಿಸಲಾಗುವುದು ?

**ಶ್ರೀ ಬಂಡೆಪ್ಪ ಕಾಶಂಪೂರ** (ಕೃಷಿ ಸಚಿವರು) :–

(ಅ) 2006–07 ನೇ ಸಾಲಿನಲ್ಲಿ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಿಗೆ ವಿವಿಧ ಯೋಜನೆಗಳಿಗಾಗಿ ಬಿಡುಗಡೆ ಮಾಡಿದ ಅನುದಾನದ ವಿವರಗಳನ್ನು ಕೆಳಗೆ ನೀಡಲಾಗಿದೆ.